# ಬಿಸಿಲೂರ ಗಾಥೆ

ಕೆಲವು ವರ್ಷಗಳ ಹಿಂದೆ ಹಳೆ ಮೈಸೂರಿನ ಭಾಗದಲ್ಲಿರುವ ಅಧಿಕಾರಿಗಳು ಏನಾದರೂ ತಪ್ಪುಗಳನ್ನು ಮಾಡಿ ಇಲಾಖೆಯ ಕೆಂಗಣ್ಣಿಗೆ ಗುರಿಯಾದರೆ ಅವರಿಗೆ ಪನಿಷ್ಮೆಂಟ್ ಟ್ರಾನ್ಸ್‌ಫರ್ (ಶಿಕ್ಷಾರೋಪಿ ವರ್ಗಾವಣೆ) ಎಂದು ಕಲಬುರಗಿ ವಿಭಾಗಕ್ಕೆ ಕಳಿಸುವುದಿತ್ತು. ದಕ್ಷಿಣ ಕರ್ನಾಟಕದವರಿಗೆ ಉತ್ತರ ಕರ್ನಾಟಕ ಅದರಲ್ಲಿಯೂ ಕಲ್ಯಾಣ ಕರ್ನಾಟಕದ ಭಾಗಕ್ಕೆ ಬರುವುದೆಂದರೆ ಮರಳುಗಾಡಿಗೆ ಬಂದಂತೆ ಭಯಾವಹ ಸಂಗತಿಯಾಗಿತ್ತು. ಈ ಭಾಗಕ್ಕೆ ಟ್ರಾನ್ಸಫರ್ ಮಾಡಿದ್ದನ್ನು ಶತಾಯಗತಾಯ ಬದಲಿಸಿಕೊಂಡು ರಾಜ್ಯದ ಇತರ ಭಾಗಗಳಿಗೆ ಹೋಗುವುದಿತ್ತು. ಇದಕ್ಕಾಗಿ ಎಷ್ಟು ಹಣ ಖರ್ಚಾದರೂ ಪರವಾಗಿಲ್ಲ. ಆದರೆ, ಕಲ್ಯಾಣ ಕರ್ನಾಟಕ ಭಾಗಕ್ಕೆ ಬರಲು ಮಾತ್ರ ಅವರು ಅಂಜಿ ಗಡಗಡ ನಡುಗುವುದಿತ್ತು. ನೌಕರಿಗೇನೆ ರಾಜೀನಾಮೆ ಕೊಡುವುದಿತ್ತು. ಈ ಭಾಗಕ್ಕೆ ಬರಲು ಅವರು ಸುತರಾಂ ಸಿದ್ಧರಿರಲಿಲ್ಲ.

ಕಲ್ಯಾಣ ಕರ್ನಾಟಕವೆಂದರೆ ಅದೇಕೆ ಇಷ್ಟು ಭಯ? ಕಾರಣ ಇಲ್ಲದಿಲ್ಲ. ಇಲ್ಲಿನ ಭಯಂಕರ ಬಿಸಿಲು ಮತ್ತು ಮಸಾರಿ ಮಣ್ಣಿನ ಹುಡಿ ದೂಳು ಅವರನ್ನು ಭಯಗ್ರಸ್ಥರನ್ನಾಗಿಸಿದೆ. ಬಿಸಿಲೆಂದರೆ ಅದು ಸಾಮಾನ್ಯವಲ್ಲ. ಕಪ್ಪು ಮಣ್ಣಿಗೆ ಸೊಕ್ಕಿದ ಸೂರ್ಯನ ಗುದುಮುರಿಗೆ ಎಂದರೆ ಅದು ಸುಮ್ಮನಲ್ಲ. ಹಿರೀಕರು ಗುರುತಿಸಿರುವಂತೆ 'ಇಲ್ಲಿ ಬಿಸಿಲು ಎಳ್ಳಮಾಸಿಗೆ ಎಳ್ಳಕಾಳಿನಷ್ಟು ಹೆಚ್ಚಾದರೆ, ಅವತ್ರಮಾಸಿಗೆ ಅವರೆ ಕಾಳಿನಷ್ಟು ಏರುಗತಿಗೆ ಬಿದ್ದರೆ, ಶಿವರಾತ್ರಿಗೆ ಬಿಸಿಲು ಶಿವ ಶಿವ ಎಂದು ಉಸಿರು ಹಾಕಿದರೆ, ಯುಗಾದಿಗೆ ಉಧೋ ಉಧೋ ತಾಯಿ ನಿನ್ನ ಬಾಯಿಗಿ ಸಿಕ್ಕವರೆಲ್ಲಾ ಬಡಕೊಂಡಾರ ಬಾಯಿ ಬಾಯಿ ಅನ್ನುವಂಗ' ಅಂದರೆ, ಬಿಸಿಲೆಂಬ ದುಷ್ಮನ್ ಬಯಲೆಂಬ ಬಯಲು ಸುತ್ತುವರೆದು ಯಾವ ಕಡಿಯೂ ಮಿಸುಕ್ಯಾಡದಂಗ ರೈತರು ಸೀತನಿ ತೆನೆಗಳ ಗೋಣು ಮುರಿದು ಕಂಬಳ್ಯಾಗ ಹಾಕಿ ಜಡತಿ ಮಾಡದಂಗ ಇರುತ್ತದೆ.

ನಾವು ಹೇಳಿ ಕೇಳಿ ಬೆಳ್ಳನ್ನ ಬಿಸಿಲ ಬಾನವುಂಡು ಬದುಕಿದವರು. ಸೂರ್ಯದೇವನಿಗೂ ನಮಗೂ ಶತಸಹಸ್ರಮಾನದ ನಂಟು. ನಂಟೇನು! ಜಟಾಪಟಿನೆ. ಡಿಸೆಂಬರಿಗೆ ಹಣಕಿ ಹಾಕುವ ಶಾಖ, ಜನವರಿ ಬರುವಷ್ಟರಲ್ಲಿ ಅಂಬೆಗಾಲಿಟ್ಟು ನಡಮನಿಗೆ ಬಂದಿರುತ್ತದೆ. ಫೆಬ್ರುವರಿಯಲ್ಲಿ ಸೂರ್ಯನಿಗೆ ಭರ್ತಿ ಜವಾನಿ ಬಂದು ಈಗ ನನಗ ಹರೆಯ ಬಂದದ ಹಾರಿ ಒದಿಯಂಗ್ ಎಂದು ಅಬ್ಬರಿಸುತ್ತಲೆ ಬರುತ್ತಾನೆ. ಮಾರ್ಚ್, ಏಪ್ರಿಲ್ ತಿಂಗಳು ಅಂದರೆ ರಣಬಿಸಿಲಿನ ತಾಪಕ್ಕೆ ಕ್ವಚಿತ್ತಾಗಿಯೆ ಇದ್ದ ಮರಗಿಡಗಳೆಲ್ಲ ಆತನ ತೆಕ್ಕೆಗೆ ಹೆದರಿ ಮೈ ಮ್ಯಾಲಿನ ಬಟ್ಟೆ ಸಹಿತ ಇಲ್ಲದಂತೆ ದಿಕ್ಪಾಪಾಲಾಗಿರುತ್ತವೆ. ಮೇ, ಜೂನ್ ತಿಂಗಳಲ್ಲಿ ನಮ್ಮ ಬದುಕು ಸುಡುವ ಹಂಚಿನ ಮೇಲೆ ನೀರು ಚೆಲ್ಲಿದಂತೆ ಸೀದು ಹೋಗುತ್ತದೆ. ಒಂದೆಡೆ ಕುಡಿಯುವ ನೀರಿಗೆ ತತ್ವಾರವಾದರೆ, ಇನ್ನೊಂದೆಡೆ ಹೊಲಗದ್ದೆಗಳಲ್ಲಿ ಕೂಲಿಯಿಲ್ಲದೆ ದುಡಿಯುವ ಜನರು ಗುಳೆ ಹೋಗುತ್ತಾರೆ. ಒಣಬೇಸಾಯವೆ ಪ್ರಧಾನವಾಗಿದ್ದ ನಾಡಿನಲ್ಲಿ ಬೇಸಿಗೆ ಎಂದರೆ, ಅರೆಹೊಟ್ಟೆ ಸಮಾರಾಧನೆ ಎಂತಲೆ ಅರ್ಥ. ಬಿಸಿಲಿನ ತಾಪದೊಂದಿಗೆ ಹೊಟ್ಟೆಯ ಹಸಿವಿನ ತಾಪವು ಸೇರಿ ಇಲ್ಲಿನವರ ಮಿಜಾಜ್ (ಸ್ವಭಾವ) ಒರಟು ಎನಿಸಿಕೊಳ್ಳುವುದುಂಟು. ಇಲ್ಲಿನ ಬಿಸಿಲೆ ಹಾಗೇ. ಸಿಟ್ಟಿನ ಗರ್ಭವದು.

ಮಹಾಕವಿ ಹರಿಹರನು ಹಂಪೆಯ ಮಗನಲ್ಲವೆ. ಅವನಿಗೆ ಗೊತ್ತು ಇಲ್ಲಿನ ಬಿಸಿಲಿನ ಪ್ರತಾಪ. ಅದನ್ನು ಅನುಭವಿಸಿದ್ದ ಆತ, ತನ್ನ 'ಗಿರಿಜಾಕಲ್ಯಾಣ' ಕಾವ್ಯದಲ್ಲಿ ಸ್ಥಳೀಯ ಬಿಸಿಲಿನ ಬೇಗೆಯನ್ನು ಎಳ್ಳಕಾಳಿನಷ್ಟೂ ಊನವಾಗದಂತೆ ಹಿಡಿದಿಟ್ಟಿದ್ದಾನೆ. ಮೇ ತಿಂಗಳ ಸೂರ್ಯನಿಗೆ ಬಾಲ್ಯವೆಂಬುದು ಇಲ್ಲವೆ ಇಲ್ಲ. ಹುಟ್ಟುವಾಗಲೆ ಯೌವನದ ಉಕ್ಕು ಸೊಕ್ಕಿನೊಂದಿಗೆ ಮುಸುಗರಿಯುತ್ತ ಮುಂಬರಿದರೆ ನಡು ಮಧ್ಯಾಹ್ನಕ್ಕೆ ಬರುವಷ್ಟರಲ್ಲಿ ಬೀಜಕ್ಕೆ ಬಂದ ಗೂಳಿಯಂತೆ ಹೂಂಕರಿಸುತ್ತಾನೆ. ರಣಾಂತಕ ಧಗೆ, ಅರಿಭಯಂಕರ ಸೆಕೆ, ನೆತ್ತಿ ಮೇಲೆ ಮೊಟ್ಟೆ ಚೆಲ್ಲಿದರೆ ಆಮ್ಲೆಟ್ ಆಗಬಹುದಾದ ಶಾಖ. ಇದು ಉತ್ಪ್ರೇಕ್ಷೆ ಎಂದೀರಿ. ನೂರಕ್ಕೆ ನೂರಷ್ಟು ಖರೆ ಮಾತು. ಇದಕ್ಕೆ ಹರಿಹರನ ಈ ಪದ್ಯಗಳೆ ಸಾಕ್ಷಿ ನೋಡಬಹುದು.

ಕರಿಯ ಬಿಸಿಲುರಿಯ ಬಿಸಿಲ/ ಚ್ಚರಿಯ ಬಿಸಿಲ್
ಪಿರಿಯ ಬಿಸಿಲಖಂಡಿತದ ಬಿಸಿಲ್|

ಹೌದು. ಎಲ್ಲಿಯೋ ಒಂದು ಕಡೆ ನೆರಳಂತೆ ಗೋಚರವಾದರೆ ಅದು ನೆರಳಲ್ಲ. ಕರಿಯ ಬಿಸಿಲು. ಮರದ ಕೆಳಗೆ, ಬರಡು ಕಾಡಿನಲ್ಲಿ, ಕಲ್ಲುಬೆಟ್ಟದ ಇಡುಕಿನಲ್ಲಿ, ಮಸಾರಿ ಮಣ್ಣಿನ ಬಯಲಲ್ಲಿ, ಬೆಂಕಿಯಂಥ ಗಗನದಲ್ಲಿ ಕ್ರಮವಾಗಿ ಕರಿಯ ಬಿಸಿಲು, ಉರಿಯ ಬಿಸಿಲು, ಅಚ್ಚರಿಯ ಬಿಸಿಲು, ಪಿರಿಯ ಬಿಸಿಲು ಹೀಗೆ ಎಲ್ಲೆಲ್ಲೂ ಅಖಂಡಿತದ ಬಿಸಿಲು ಅಚ್ಛಾದಿತವಾಗಿ ನರರಾದಿ ಪಶು, ಪಕ್ಷಿ, ಕ್ರಿಮಿ, ಕೀಟಗಳು ಪ್ರಾಣಿಗಳಾದಿಯಾಗಿ ಜೀವಗಳೆಂಬ ಜೀವಗಳು ಬಿಸಿಲ ಧಗೆಗೆ ಬಸವಳಿದು ತೇಕು ಹಾಕುತ್ತವೆ. ಈ ಅವಧಿಯಲ್ಲಿ ಹೊಲಗಳಿಗೆ ಹೋದರಂತೂ ಮೃಗಜಲದ ಸೆಳವಿಗೆ ಸಿಕ್ಕು ವಾಂತಿ, ಭೇದಿಗೆ ಬಲಿಯಾಗುವುದು ಗ್ಯಾರಂಟಿ.

ಇಂಥ ರಣಬಿಸಿಲಿನ ನಡುವೆಯೂ ರೈತಾಪಿ ಮಹಿಳೆಯರು ಅಡವಿಗೆ ಹೋಗಿ ಉರುವಲು ಒಟ್ಟು ಮಾಡಲೇಬೇಕು. ಇಲ್ಲವಾದರೆ ಮಳೆಗಾಲದಲ್ಲಿ ಒಲೆಗೆ ಉರುವಲು ಇಲ್ಲದೆ ಹಸಿ ಹಿಟ್ಟು ತಿನ್ನಬೇಕಾದೀತು. ರಣಭಯಂಕರ ಮೃಗಜಲದ ಜಾಲ ಅದೆಂಥದ್ದು ಎಂದರೆ ಅದನ್ನು ಹರಿಹರನ ಬಾಯಲ್ಲಿ ಕೇಳುವುದೆ ಹೆಚ್ಚು ಸೂಕ್ತ.

ಪೊಸಬೇಸಿಗೆಯೊಳ್ ಮೃಗತತಿ
ಯಸುವೆರಸಿರವೇಳ್ಕುಮೆಂದು ಕರುಣಿಸಿ ಮಿತ್ರಂ|
ಬಿಸಿಲಂ ಹಿಳಿದೊಡೆ ಬೆನ್ನೀ
ರೊಸರ್ವಂತಿರ್ದುದು ಮರಿಚೀಕಾಜಲಮೆತ್ತಂ|

ಇಲ್ಲಿಯ ಬೇಸಿಗೆ ಮಾಮೂಲಿನಂತಲ್ಲ. ಹೊಸ ಬಗೆಯ ಬೇಸಿಗೆ. ಕಡು ಬಿಸಿಲಿನ ಬೇಗೆಗೆ ಮೃಗಗಳು ಬಾಯಾರಿ ಪರಿತಪಿಸುತ್ತಿವೆ ಎಂದು ನಮ್ಮ ಹಿತಮಿತ್ರನಾಗಿರುವ ಸೂರ್ಯದೇವನು ಕರುಣೆಯಿಂದ ಬಿಸಿಲನು ಹಿಂಡಿ, ಬಿಸಿ ನೀರನ್ನು ಒಸರಿಸಿದನೋ ಎಂಬಂತೆ ಮರೀಕಾಜಲ ಅಂದರೆ ಬಿಸಿಲಿನ ಝಳ ಚೆಲ್ಲಿರುವನಂತೆ. ಝಳವನ್ನು ನೀರೆಂದು ಬೆನ್ನತ್ತಿ ಮೃಗಪಕ್ಷಿಗಳು ಬಸವಳಿದು ಅಸುನೀಗುವುದು ಇದೆ. ಇಂಥ ಬಿಸಿಲಿಗೆ ಅಂಜುವುದು ಮಲೆಸೀಮೆಯವರಿಗೆ ಸಹಜವೆ ಆದರೂ, ನಾವು ಈ ಯಮಯಾತನೆಗೆ ಸೆಡ್ಡು ಹೊಡೆದು ಬದುಕು ಕಟ್ಟಿಕೊಂಡಿದ್ದೇವೆ. ಎಲ್ಲರಿಗೂ ಮಳೆ, ಚಳಿ, ಬೇಸಿಗೆ ಮೂರು ಕಾಲಗಳಿದ್ದರೆ, ನಮಗೆ ಮಾತ್ರ ಎರಡು ಕಾಲ. ಬೇಸಿಗೆ ಮತ್ತು ರಾಜಬೇಸಿಗೆ ಅಷ್ಟೆ. ಅದೇಕೋ ಸೂರ್ಯದೇವನಿಗೆ ನಮ್ಮ ಮೇಲೆ ಅತಿ ಹೆಚ್ಚು ಪ್ರೀತಿಯೋ, ಮುನಿಸೋ ಗೊತ್ತಿಲ್ಲ. ಭರ್ತಿ ಬಿಸಿಲು ನಮ್ಮ ಭಾಗದ ಸಂಸ್ಕೃತಿಯನ್ನು ರೂಪಿಸಿದೆ. ಬಿಸಿಲ ಬಾನಾ ಉಂಡು ಸುಸೂಲಾದ ಮಜ್ಜಿಗೆ ಕುಡಿಯಲು ಕಲ್ಯಾಣ ಕರ್ನಾಟಕಕ್ಕೆ ಬರಬೇಕು. ಮಲೆನಾಡಿನಿಂದ ಬರುವ ಅಧಿಕಾರಿಗಳು ಸುರುವಿನಲ್ಲಿ ಇಲ್ಲಿಗೆ ಬರಲು ಜಕಜಕ ಜರೆಯುತ್ತಾರೆ. ಆದರೆ ಬಂದ ಮೇಲೆ ಇಲ್ಲಿನ ಬಿಸಿಲಿನ ಶಕ್ತಿ ಮತ್ತು ಇಲ್ಲಿನವರ ಅಕಲಂಕಿತ, ಅಸೂಕ್ಷ್ಮ ಅಪರಂಪಾರ ಪ್ರೀತಿ, ಅಭಿಮಾನ ಕಂಡುಂಡ ಬಳಿಕ ಇಲ್ಲಿನಿಂದ ಮರಳಿ ಹೋಗಲು ಅರೆಜೀವವಾಗುವುದುಂಟು. ಇದಕ್ಕೆ ಅಪವಾದಗಳು ಇಲ್ಲದಿಲ್ಲ. ಬಿಸಿಲು ನಮ್ಮವರ ಶಕ್ತಿ ಮತ್ತು ದೌರ್ಬಲ್ಯ ಎರಡೂ ಆದದ್ದಂತೂ ಸೋಜಿಗವೆ ಸರಿ. ಹವಾಮಾನ ವೈಪರೀತ್ಯದಿಂದ ಕೊಂಚ ಬದಲಾವಣೆ ಕಂಡರೂ, ನಮ್ಮವರ ಬದುಕಿನಲ್ಲಿ ಯಾವ ಬದಲಾವಣೆಯೂ ಕಂಡುಬರದಿರುವುದು, ಬಿಸಿಲಿಗೂ ನಮಗೂ ಇರುವ ಅನನ್ಯ ಸಂಬಂಧ ಎಂದರೆ ಅತಿಶಯೋಕ್ತಿಯಲ್ಲ.

■ ಮೀನಾಕ್ಷಿ ಬಾಳಿ

## ಮಾತೇ ಮುತ್ತು

- ಸೋಮಾರಿಗಳಿಗೆ ಮಾತ್ರ ತಮ್ಮ ಭವಿಷ್ಯದಲ್ಲಿ ನಂಬಿಕೆ ಇರುವುದಿಲ್ಲ.
  —ಹೆನ್ರಿ
- ಆಸೆಯನ್ನು ಸೋಲಿಸಲು ಇರುವ ಒಂದೇ ದಾರಿ– ಅದಕ್ಕೆ ಬಲಿಯಾಗುವುದು.
  —ಆಸ್ಕರ್ ವೈಲ್ಡ್
- ಒಂದು ದೇಶದ ಯೋಗ್ಯತೆಯನ್ನು ಅಲ್ಲಿಯ ಕಲೆಗಳ ಮಟ್ಟದಿಂದ ಅಳೆದು ನೋಡಬಹುದು.
  —ಜವಾಹರಲಾಲ್ ನೆಹರೂ
- ಗುರಿ ಸಾಧಿಸುವವರೆಗೆ ಹೋರಾಟ ನಿಲ್ಲಿಸಬೇಡಿ.
  —ಸ್ವಾಮಿ ವಿವೇಕಾನಂದ
- 'ಹೆಣ್ಣು ಕೊರಳಿಗೆ ಬಿಗಿವ ಕಲ್ಲು ಗುಂಡು' ಎನಬೇಡ. ಕೇಳೆನ್ನ ಮದುವೆ ಗಂಡು ಸಂಸಾರ ಸಾಗರದಿ ಹೆಣ್ಣು ಗಂಡು ಕುತ್ತಿಗೆಗೆ ಗುಂಡಲ್ಲ ಬೆನ್ಗೆ ಬೆಂಡು.
  —ಕುವೆಂಪು
- ಪ್ರೀತಿಯೊಂದೇ ದ್ವೇಷಾಸೂಯೆಯನ್ನು ಹೋಗಲಾಡಿಸಬಲ್ಲದು.
  —ಬುದ್ಧ